MAY 03, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ವಿಧಾನಸಭಾ ಕ್ಷೇತ್ರದ,** 2023ರ ವಿಧಾನಸಭೆ ಚುನಾವಣೆಯ, ಅಂಚೆ ಮತಗಳ ಮರು ಪರಿಶೀಲನೆ ಹಾಗೂ ಮರು ಮತ ಎಣಿಕೆ ನಿನ್ನೆ ತಡರಾತ್ರಿ ವರೆಗೆ ನಡೆದಿದ್ದು, ವರದಿಯನ್ನು, ಉಚ್ಚ ನ್ಯಾಯಾಲಯ ಹಾಗೂ ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾಗಿ, ಚುನಾವಣಾಧಿಕಾರಿ ಗೌರವಕುಮಾರ ಶೆಟ್ಟಿ, ಚಿಕ್ಕಮಗಳೂರಿನಲ್ಲಿ ತಿಳಿಸಿದ್ದಾರೆ.

<><><>

**ಚುನಾವಣಾಧಿಕಾರಿ ಗೌರವಕುಮಾರ ಶೆಟ್ಟಿ ಧ್ವನಿ 43 ಸೆಕೆಂದುಗಳು**

<><><>

**ವಿಧಾನಸಭೆ ವಿಪಕ್ಷ ನಾಯಕ** ಆರ್. ಅಶೋಕ ಬೆಂಗಳೂರಿನಲ್ಲಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವಾಯ್. ವಿಜಯೇಂದ್ರ ತುಮಕೂರಿನಲ್ಲಿ ಪ್ರತಿಕ್ರಿಯಿಸಿ, ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ ಅವರಿಗೆ ಅನ್ಯಾಯವಾಗಿದೆ. ಇದು ಮತದಾರರಿಗೆ ಸಂದ ಜಯ ಎಂದಿದ್ದಾರೆ.

<><><>

**ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ** ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ, ಮತ ಎಣಿಕೆ ಕಾರ್ಯ, ನಾಳೆ ಬೆಳಗ್ಗೆ 8 ಗಂಟೆಗೆ ಆರಂಭವಾಗಲಿದ್ದು, ಮೊದಲು ಅಂಚೆ ಮತಗಳ ಎಣಿಕೆ, ಬಳಿಕ 8.30ಕ್ಕೆ ಇಲೆಕ್ಟ್ರಾನಿಕ್ ವೋಟಿಂಗ್ ಮಷೀನ್ ಮತಗಳ ಎಣಿಕೆ ಆರಂಭವಾಗಲಿದೆ. ಮಧ್ಯಾಹ್ನ 12 ಗಂಟೆ ವೇಳೆಗೆ ಫಲಿತಾಂಶ ಲಭ್ಯವಾಗುವ ನಿರೀಕ್ಷೆ ಇದೆ.

<><><>

**ದಾವಣಗೆರೆ ದಕ್ಷಿಣ ಕ್ಷೇತ್ರದ ಮತ ಎಣಿಕೆ,** ನಗರದ ಡಿ.ಆರ್.ಆರ್. ವಿದ್ಯಾ ಸಂಸ್ಥೆಯಲ್ಲಿ ಹಾಗೂ ಬಾಗಲಕೋಟೆ ಕ್ಷೇತ್ರದ ಮತಗಳ ಎಣಿಕೆ, ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ, ನಡೆಯಲಿದೆ

<><><>

**ಭಾರತ, ತನ್ನ ಅಗತ್ಯದ ಶೇಕಡ 50ರ** ಷ್ಟ ಅಡುಗೆ ಅನಿಲವನ್ನು, ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ದಾವಣಗೆರೆಯಲ್ಲಿ ಮಾತನಾಡಿದ, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಈ ವಿಷಯ ತಿಳಿಸಿದರು. ಮಧ್ಯ ಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳ ಮಧ್ಯದ, ಸಂಘರ್ಷದ ಪರಿಣಾಮ, ಕಚ್ಚಾತೈಲ ಹಾಗೂ ಅನಿಲ ಪೂರೈಕೆ ಸರಪಳಿಯಲ್ಲಿ ವ್ಯತ್ಯಯವಾಗಿದೆ. ಹಾರ್ಮುಜ್ ಜಲಸಂಧಿ ಮೂಲಕ, ಅನಿಲ ಪೂರೈಕೆಯಾಗುತ್ತಿದ್ದು, ಅಲ್ಲಿನ ಅಸ್ಥಿರತೆ, ಬೆಲೆಯ ಮೇಲೆ ಪ್ರಭಾವ ಬೀರಿದೆ ಎಂದು,

ಕೇಂದ್ರ ಸಚಿವ ಜೋಶಿ ಸ್ಪಷ್ಟ ಪಡಿಸಿದರು. ಜಾಗತಿಕವಾಗಿ ಅನಿಲ ದರ ಇಳಿಕೆಯಾದ ತಕ್ಷಣ, ದೇಶೀಯವಾಗಿಯೂ ದರ ತಗ್ಗಲಿದೆ ಎಂದು, ಅವರು ವಿಶ್ವಾಸ ವ್ಯಕ್ತಪಡಿಸಿದರು.

<><><>

**ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ,** ಇಂದು ಮಧ್ಯಾಹ್ನ 2 ರಿಂದ, ಸಂಜೆ 5 ಗಂಟೆಯ ವರೆಗೆ, ರಾಷ್ಟ್ರೀಯ ಅರ್ಹತಾ ಪರೀಕ್ಷೆ – ನೀಟ್ ಯು.ಜಿ. 2026, ಪರೀಕ್ಷೆ ಆಯೋಜಿಸಿದೆ.

<><><>

**ಹಾಸನ ಜಿಲ್ಲೆಯ, ವಿವಿಧ** ತಾಲೂಕುಗಳಲ್ಲಿ, 2025–26ನೇ ಸಾಲಿನಲ್ಲಿ, ಹವಾಮಾನ ವೈಪರಿತ್ಯದಿಂದಾಗಿ, ಮುಂಗಾರು ಹಂಗಾಮಿನಲ್ಲಿ, ಹೈಬ್ರೀಡ್ ಮುಸುಕಿನ ಜೋಳಕ್ಕೆ, ಬಿಳಿಸುಳಿ ರೋಗ ಬಾಧೆ ಕಂಡುಬಂದು, ರೈತರಿಗೆ ನ ್ಟವಾಗಿತ್ತು. 2026–27ನೇ ಸಾಲಿನ ಮುಂಗಾರು ಹಂಗಾಮಿಗೆ, ಅಗತ್ಯ ಪ್ರಮಾಣದ ಉತ್ತಮ ಗುಣಮಟ್ಟದ, ಮುಸುಕಿನ ಜೋಳ ಬಿತ್ತನೆ ಬೀಜವನ್ನು, ರೈತರಿಗೆ ವಿತರಿಸಲು, ಮುನ್ನೆಚರಿಕೆ ಕ್ರಮವಾಗಿ, ಮಂಡ್ಯದ ಕೃಷಿ ವಿಶ್ವವಿದ್ಯಾಲಯ, ಬಿತ್ತನೆ ಬೀಜಗಳನ್ನು ಪರೀಕ್ಷೆಗೆ ಒಳಪಡಿಸಿ, ಪ್ರಮಾಣೀಕರಿಸಿದೆ.

<><><>

**ಗದಗ ಜಿಲ್ಲೆ, ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ** ಪ್ರಾಧಿಕಾರ, 6 ಸ್ಮಾರಕಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ, ಪ್ರಾಚ್ಯ ಅಶೇ ಗಳ ಅನ್ವೇ ಣೆಯ, ಸಪ್ತಾಹ ಆಯೋಜಿಸಿದೆ. ಪ್ರವಾಸೋದ್ಯ ಹಾಗೂ ಜಿಲ್ಲಾ ಉಸ್ತುವಾರಿ ಖಾತೆ ಸಚಿವ, ಎಚ್.ಕೆ ಪಾಟೀಲ, ಲಕ್ಕುಂಡಿಯ, ಶ್ರೀ ಹಾಲಗುಂಡಿ ಬಸವೇಶ್ವರ ದೇವಾಲಯದ ಆವರಣದಲ್ಲಿ, ಅನ್ವೇಷಣಾ ಸಪ್ತಾಹಕ್ಕೆ ಚಾಲನೆ ನೀಡಿದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯ,** ಕೇಂದ್ರ ನೀತಿ ಆಯೋಗದ, ಪೂರ್ಣಾವಧಿ ಸದಸ್ಯರಾಗಿ, ಮೈಸೂರಿನ, ಹೆಗ್ಗಡದೇವನಕೋಟೆ ಬಳಿಯ, ಸರಗೂರಿನ, ಶ್ರೀ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ, ಡಾಕ್ಟರ್ ಆರ್. ಬಾಲಸುಬ್ರಹ್ಮಣ್ಯಂ ನೇಮಕಗೊಂಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಅಭಿನಂದಿಸಿದ್ದಾರೆ.

<><><>

**ನಿವೃತ್ತ ಐ.ಎ.ಎಸ್. ಅಧಿಕಾರಿ,** ಜಿ. ಸತ್ಯವತಿ ಅವರನ್ನು, ರಾಜ್ಯ ಮಾಹಿತಿ ಆಯೋಗದ, ಮುಖ್ಯ ಆಯುಕ್ತರನ್ನಾಗಿ ನೇಮಿಸಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ ಆದೇಶಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ, ಉನ್ನತ ಮಟ್ಟದ ಸಮಿತಿ ಸಭೆ, ಈ ಆಯ್ಕೆ ಕೈಗೊಂಡಿದೆ.

<><><>

**ಹಾವೇರಿ ಜಿಲ್ಲಾ ಪಂಚಾಯ್ತಿ, ಸಿ.ಇ.ಓ.** ರುಚಿ ಬಿಂದಲ್, ರಾಜ್ಯ ಹಣಕಾಸು ಇಲಾಖೆಯ, ಉಪಕಾರ್ಯದರ್ಶಿಯಾಗಿ, ನಿಯುಕ್ತರಾಗಿದ್ದಾರೆ.

<><><>

**ತುಮಕೂರು ಜಿಲ್ಲೆಯ ವಿವಿಧೆಡೆ,** ಹಕ್ಕಿಜ್ವರ ಎಚ್5 ಎನ್1 ಸೋಂಕಿನಿಂದ, ನವಿಲುಗಳು ಮೃತಪಟ್ಟಿರುವುದು, ವರದಿಗಳಿಂದ ದೃಢ ಪಟ್ಟಿದೆ. ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ರಾಜ್ಯದ ಎಲ್ಲ ಮೃಗಾಲಯಗಳು, ಪಕ್ಷಿಧಾಮಗಳಲ್ಲಿ ಈ ಕುರಿತು, ಕಟ್ಟೆಚ್ಚರ ವಹಿಸುವಂತೆ, ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಕೇಂದ್ರ ಸರ್ಕಾರದ, ಪರಿಷ್ಕೃತ ಎಚ್5 ಎನ್1 ಮಾರ್ಗಸೂಚಿಯಂತೆ, ಕ್ರಮ ಕೈಗೊಳ್ಳಲು ನಿರ್ದೇಶಿಸಿದ್ದಾರೆ.

<><><>

**ಚಿತ್ರದುರ್ಗದ ಹೊರ ವಲಯದ ಮೈದಾನದಲ್ಲಿ,** ಈ ತಿಂಗಳ 9 ರಂದು ನಡೆಯಲಿರುವ, ಬಿಜೆಪಿ ಹಿರಿಯ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವದ ಪೂರ್ವ ಸಿದ್ಧತೆಗಳನ್ನು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಪರಿಶೀಲಿಸಿದರು.

<><><>

**ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ,** ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, 17 ಕೋಟಿ 5 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿಸುತ್ತಿರುವ, ಅತ್ಯಾಧುನಿಕ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಾಣಕ್ಕೆ, ಶಾಸಕ ಜಿ. ಜನಾರ್ದನ ರೆಡ್ಡಿ, ಭೂಮಿ ಪೂಜೆ ನೆರವೇರಿಸಿದರು.

**<><><>**

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**<><><>**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**